17-7-2010 ಶನಿವಾರ

# ಕನ್ನಡಪ್ರಭ

ಕನ್ನಡ ಪ್ರಭ 17-7-2010

# ಸ್ಲಮ್ ಮಕ್ಕಳಿಗೆ ಉಚಿತ ಪೌಷ್ಟಿಕ ಆಹಾರ

## ■ ರೀಟಾ ಫರ್ನಾಂಡಿಸ್ ಚಾಲನೆ ■ ಸ್ವಯಂ ಸೇವಾ ಸಂಸ್ಥೆಗಳ ಕಾರ್ಯಕ್ಕೆ ಶ್ಲಾಘನೆ



*ಬೀದರ್‌ನ ಡಿ. ದೇವರಾಜ್ ಅರಸು ಕಾಲೋನಿಯಲ್ಲಿ ಸಂಕೇತ ಸ್ವಯಂ ಸೇವಾ ಸಂಸ್ಥೆಯು ಬೆಂಗಳೂರಿನ ಮಾನವ ಚಾರಿಟೀಸ್ ಮತ್ತು ಫಂಡ್‌ರೈಜರ್ ಸಂಸ್ಥೆ ಸಹಯೋಗದೊಂದಿಗೆ ಸ್ಲಮ್ ಮಕ್ಕಳಿಗೆ ಉಚಿತ ಪೌಷ್ಟಿಕ ಆಹಾರ ವಿತರಣೆ ಯೋಜನೆಗೆ ನಗರಸಭೆ ಅಧ್ಯಕ್ಷೆ ರೀಟಾ ಫರ್ನಾಂಡಿಸ್ ಚಾಲನೆ.*

ಬೀದರ್: ನಗರದ ಡಿ. ದೇವರಾಜ್ ಅರಸು ಕಾಲೋನಿಯಲ್ಲಿ ಸಂಕೇತ ಸ್ವಯಂ ಸೇವಾ ಸಂಸ್ಥೆಯು ಬೆಂಗಳೂರಿನ ಮಾನವ ಚಾರಿಟೀಸ್ ಮತ್ತು ಫಂಡ್‌ರೈಜರ್ ಸಂಸ್ಥೆ ಸಹಯೋಗದೊಂದಿಗೆ ಸ್ಲಮ್ ಮಕ್ಕಳಿಗೆ ಉಚಿತ ಪೌಷ್ಟಿಕ ಆಹಾರ ವಿತರಣೆ ಯೋಜನೆಗೆ ಚಾಲನೆ ನೀಡಲಾಯಿತು.

ನಗರಸಭೆ ಅಧ್ಯಕ್ಷೆ ರೀಟಾ ಫರ್ನಾಂಡಿಸ್ ಮಕ್ಕಳಿಗೆ ಆಹಾರ ವಿತರಣೆ ಮಾಡುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸರ್ಕಾರ ಮಕ್ಕಳಿಗೆ ಪೌಷ್ಟಿಕ ಆಹಾರ ವಿತರಣೆ ಮಾಡುವ ಉದ್ದೇಶದೊಂದಿಗೆ ಜಾರಿಗೆ ತರುತ್ತಿರುವ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನಗೊಳ್ಳುತ್ತಿಲ್ಲ. ಬಿಸಿಯೂಟ, ಆಹಾರ ಮತ್ತು ನಾಗರೀಕ ಸರಬರಾಜು ಯೋಜನೆಯ ಲಾಭ ಮಕ್ಕಳಿಗೆ ತಲುಪುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸ್ಲಮ್ ಮಕ್ಕಳಿಗೆ ಉಚಿತ ಪೌಷ್ಟಿಕ ಆಹಾರ ವಿತರಣೆಗೆ ಮುಂದಾಗಿರುವ ಸಂಸ್ಥೆಗಳ ಕಾರ್ಯ ಶ್ಲಾಘನೀಯ. ಇನ್ನೂ ಹೆಚ್ಚಿನ ಮಕ್ಕಳು ಸಂಸ್ಥೆಯ ಲಾಭ ಪಡೆಯುವ ನಿಟ್ಟಿನಲ್ಲಿ ಅಗತ್ಯ ಸಹಾಯ ಸಹಕಾರ ಮಾಡಲಾಗುವುದು ಎಂದು ಭರವಸೆ ನೀಡಿದರು.ಸಿಡಿಪಿಓ ಶ್ರೀಕಾಂತ ಕುಲಕರ್ಣಿ ಮಾತನಾಡಿ, ಸ್ಲಮ್ ಮಕ್ಕಳಿಗೆ ಆಹಾರ ಒದಗಿಸಲು ಅಂಥ ಮಕ್ಕಳ ಸರ್ವೆ ಮಾಡಿ ಪ್ರತಿ ಮಗುವಿಗೆ ಗುರುತಿನ ಚೀಟಿ ಮತ್ತು ಊಟದ ಕೂಪನ್ ನೀಡುತ್ತಿರುವ ಸಂಸ್ಥೆ ಕೆಲಸ ಅಭಿನಂದನಾರ್ಹ. ಇಲಾಖೆಯಿಂದ ಪ್ರತಿ ಅಂಗನವಾಡಿ ಮೂಲಕ ಮಕ್ಕಳಿಗೆ ಸಂಸ್ಕರಿಸಿದ ಪೌಷ್ಠಿಕ ಆಹಾರ ಒದಗಿಸಲಾಗುತ್ತಿದ್ದು, ಸ್ಲಮ್ ಮಕ್ಕಳು ಇದರ ಲಾಭ ಪಡೆಯಬೇಕು ಎಂದು ಕರೆ ನೀಡಿದರು.

**■ ಬಡ ಮಕ್ಕಳಿಗೆ ಯೋಜನೆ ತಲುಪಲಿ:** ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ವಿಜಯಕುಮಾರ ಸೋನಾರೆ ಮಾತನಾಡಿ, ಸಂಸ್ಥೆಯು ಕೈಗೊಂಡಿರುವ ಯೋಜನೆಯ ಲಾಭ ಅರ್ಹ ಬಡ ಮಕ್ಕಳಿಗೆ ತಲುಪಬೇಕು ಎಂದರು.

ಸಂಕೇತ ಸಂಸ್ಥೆಯ ಅಧ್ಯಕ್ಷ ರಮೇಶ ಅಂಬುಲ್ಗೇಕರ್ ಪ್ರಾಸ್ತಾವಿಕವಾಗಿ ಮಾತನಾಡಿ, ನಗರದಲ್ಲಿ 100 ಮಕ್ಕಳ ಸರ್ವೆ ಮಾಡಿ ಕಾರ್ಯಕ್ರಮ ರೂಪಿಸಲಾಗಿದ್ದು, ಮುಂದಿನ ದಿನಗಳಲ್ಲಿ 1500 ಮಕ್ಕಳಿಗೆ ನಿರಂತರವಾಗಿ ಉಚಿತ ಆಹಾರ ಒದಗಿಸುವ ಗುರಿ ಹೊಂದಲಾಗಿದೆ ಎಂದರು.

ಮಾನವ ಚಾರಿಟೀಸ್ ಕಾರ್ಯದರ್ಶಿ ರಾಜೇಂದ್ರ ಕುಲಕರ್ಣಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಕೊಳಚೆ ಪ್ರದೇಶವನ್ನು ಉತ್ತಮ ನಾಗರಿಕ ಪ್ರದೇಶವಾಗಿಸಬೇಕು. ಈ ನಿಟ್ಟಿನಲ್ಲಿ ಶ್ರಮಿಸಲಾಗುವುದು.

ದೇವರಾಜ್ ಅರಸು ಕಾಲೋನಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು ಎಂದು ಜಿಲ್ಲಾಡಳಿತಕ್ಕೆ ಒತ್ತಾಯಿಸಿದರು. ಕಾರ್ಯಕ್ರಮದಲ್ಲಿ ಪ್ರಮುಖರಾದ ದೇವದಾಸ ಚಿಲ್ಲರ್ಗಿ, ಫರ್ನಾಂಡಿಸ್ ನಾವದಗೇರಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು. ಧೂಳಪ್ಪ ನಿರೂಪಿಸಿ ಉಮೇಶ ಪಾಟೀಲ್ ವಂದಿಸಿದರು.